03–04	04–05	05–06	06–07	07–08
ಇಲ್ಲ	ಇಲ್ಲ	ರೂ. 38400	ರೂ.250000	ಇಲ್ಲ

(ಆ) ಖರ್ಚಾಗಿರುವ ಹಣ :

03–04	04–05	05–06	06–07	07–08
ಇಲ್ಲ	ಇಲ್ಲ	ರೂ. 38400	ರೂ.223250	ಇಲ್ಲ

(ಇ) ಉಳಿದಿರುವ ಹಣ :

03–04	04–05	05–06	06–07	07–08
ಇಲ್ಲ	ಇಲ್ಲ	ಇಲ್ಲ	ರೂ.26750	ಇಲ್ಲ

ಈ ಉಳಿದಿರುವ ಹಣವನ್ನು ಈ ವರ್ಷ ಇದೇ ಯೋಜನೆಯಲ್ಲಿ ಖರ್ಚು ಮಾಡಲಾಗುವುದು.

ಮಹಿಳಾ ಸ್ವಸಹಾಯ ಸಂಘಗಳಿಗೆ ಹಣ ಬಿಡುಗಡೆ

1138 (1232) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮೈಕ್ರೋ ಕ್ರೆಡಿಟ್ ಯೋಜನೆಯಡಿಯಲ್ಲಿ ಎಷ್ಟು ಮಹಿಳಾ ಸ್ವಸಹಾಯ ಸಂಘಗಳಿಗೆ ಹಣ ಮಂಜೂರು ಮಾಡಲಾಗಿದೆ;

(ಆ) ಅದರಲ್ಲಿ ಭಾಲ್ಕಿ ತಾಲ್ಲೂಕಿನ ಎಷ್ಟು ಮಹಿಳಾ ಸ್ವ–ಸಹಾಯ ಸಂಘಗಳಿಗೆ ಮಂಜೂರು ಮಾಡಲಾಗಿರುವ ಹಣ ಎಷ್ಟು ?(ವಿವರ ನೀಡುವುದು)

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು)

(ಅ) 2006–07ನೇ ಸಾಲಿನಲ್ಲಿ ಮೈಕ್ರೋ ಕ್ರೆಡಿಟ್ ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ಒಟ್ಟು 184 ಮಹಿಳಾ ಸ್ವ–ಸಹಾಯ ಸಂಘಗಳಿಗೆ ಸಾಲ (ಹಣ) ಮಂಜೂರು ಮಾಡಲಾಗಿದೆ.

(ಆ) ಭಾಲ್ಕಿ ತಾಲ್ಲೂಕಿನ ಶ್ರೀ ರಮಾಬಾಯಿ ಸ್ತ್ರೀ ಶಕ್ತಿ ಸಂಘ, ಕಾಕನಾಳ, ಈ ಸಂಘದ 15 ಮಹಿಳಾ ಸದಸ್ಯರಿಗೆ ರೂ. 2.25 ಲಕ್ಷ ಅವಧಿಸಾಲ ಮತ್ತು ರೂ. 1.50 ಲಕ್ಷ ಸಹಾಯಧನ ಒಟ್ಟು ರೂ. 3.75 ಲಕ್ಷಗಳನ್ನು ದಿನಾಂಕ: 03–05–06ರಂದು ಬಿಡುಗಡೆ ಮಾಡಲಾಗಿದೆ.